ಬರುತ್ತದೆ. ಒಂದು ತಾಲ್ಲೂಕಿಗೆ ಎರಡು ಕೋಟಿ ರೂಪಾಯಿಗಳು ಆಗುತ್ತದೆ. ಇದು ಪ್ರಧಾನಮಂತ್ರಿ ಸಡಕ್ ಯೋಜನೆಯನ್ನು ಹೊರತುಪಡಿಸಿ ಮಾಡಲಾಗುತ್ತದೆ. ಮತ್ತು ನೂರು ಲಕ್ಷ ರೂಪಾಯಿಗಳ ಕಾರ್ಯಕ್ರಮವೇನಿದೆ ಅಧರಲ್ಲಿ 60-70 ಲಕ್ಷ ರೂಪಾಯಿಗಳು ಖರ್ಚಾಗಿದೆ. ಪ್ಯಾಕೇಜ್‌ನಲ್ಲಿ ಎರಡು ಕೋಟಿ ರೂಪಾಯಿ ಪ್ರತಿಯೊಂದು ತಾಲ್ಲೂಕಿಗೆ ಬಳ್ಳಾರಿಯಲ್ಲಿ ಕೊಟ್ಟದೆ. ಅದು ಪ್ಯಾಕೇಜ್‌ಗೆ ಸಂಬಂಧಪಟ್ಟಿದ್ದು.

11.40 ಎ.ಎಂ.

ಪ್ರತಿ ತಾಲ್ಲೂಕಿಗೂ ''ಸಡಕ್ ಯೋಜನೆ'' ಮೇರೆಗೆ ಅಲ್ಲಿ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನೂ 50 ಲಕ್ಷ ರೂಪಾಯಿಗಳನ್ನು ''ನಬಾರ್ಡ್''ನಿಂದ ಲೋನ್ ತೆಗೆದುಕೊಂಡು ಪ್ರತಿ ತಾಲ್ಲೂಕಿಗೂ ಕೊಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದರೆ ಬಳ್ಳಾರಿ ಜಿಲ್ಲೆಗೆ ಮಾತ್ರ ಎರಡು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.

ಮೈಸೂರು ನಗರದ ಪಡುವಾರಹಳ್ಳಿ ಮತ್ತು ಕುವೆಂಪುನಗರ ಹೌಸಿಂಗ್ ಬೋರ್ಡ್ ಕಾಲೋನಿಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವುದು.

206(2409)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಪಡುವಾರಹಳ್ಳಿ ಮತ್ತು ಕುವೆಂಪುನಗರ ಹೌಸಿಂಗ್ ಬೋರ್ಡ್ ಕಾಲೋನಿಗಳಲ್ಲಿ ಹೊಸದಾಗಿ ಸರ್ಕಾರಿ ಗ್ರಂಥಾಲಯಗಳನ್ನು ಪ್ರಾರಂಭಿಸಬೇಕೆಂಬ ಬಗ್ಗೆ ಸರ್ಕಾರದ ತೀರ್ಮಾನವೇನು?

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿವರಿಸುವುದು?

ಶ್ರೀ ಬಾಬುರಾವ್ ಚಿವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಮೈಸೂರು ನಗರದ ಪಡುವಾರಹಳ್ಳಿ ಮತ್ತು ಕುವೆಂಪು ನಗರ ಹೌಸಿಂಗ್

ಬೋರ್ಡ್ ಕಾಲೋನಿಗಳಲ್ಲಿ ಹೊಸದಾಗಿ ಸರ್ಕಾರಿ ಗ್ರಂಥಾಲಯ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಮೊದಲನೆಯ ಪ್ರಶ್ನೆಗೆ (ಉತ್ತರವಾಗಿ ಹೊಸ ಸರ್ಕಾರಿ ಗ್ರಂಥಾಲಯ ಪ್ರಾರಂಭಿಸುವ ಪ್ರಸ್ತಾವನೆ) ಸರ್ಕಾರದ ಮುಂದಿರುವುದಿಲ್ಲ ಎಂದೂ ಹಾಗೂ ಎರಡನೆಯ ಪ್ರಶ್ನೆಗೆ ಅದು ಉದ್ಭವಿಸುವುದಿಲ್ಲವೆಂದು ಸರ್ಕಾರ ಉತ್ತರವನ್ನು ಕೊಟ್ಟಿದೆ. ಶಿಕ್ಷಣಕ್ಕೆ ಮಹತ್ವವನ್ನು ಕೊಡುವ ಇವರು ಗ್ರಂಥಾಲಯಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಮುಂದಿರುವುದಿಲ್ಲ, ಅದು ಉದ್ಭವಿಸುವುದಿಲ್ಲವೆಂದು ಹೇಳುತ್ತಾರೆ. ಮಾನ್ಯ ಶ್ರೀ ಎಸ್.ಎಂ.ಕೃಷ್ಣರವರು ''ಶ್ರೀ ಶಕ್ತಿ'' ಎಂದು ಪುಸ್ತಕಕ್ಕೆ ಹೆಸರು ಇಟ್ಟರು, ಅದಕ್ಕೆ ಒಂದು ಮೆರುಗು ಇದೆ. ಅವರು ವಿದ್ಯೆಯನ್ನು ಕೊಡಬೇಕೆಂದು ಇಟ್ಟರು, ನಾನೂ ಸಹ ಆ ಪುಸ್ತಕವನ್ನು ಓದಿ ಕವನವನ್ನು ಬರೆದಿದ್ದೇನೆ. ಈಗ ನನ್ನ ಪ್ರಶ್ನೆ ಏನೆಂದರೆ, ಮುಂದೆ ಮೈಸೂರಿನ ಕೆಲವು ಭಾಗಗಳಲ್ಲಿ ವಾಚನಾಲಯಗಳನ್ನು ತೆರೆಯುವಂಥಾದ್ದು ನಿಮಗೆ ಯೋಚನೆ ಏನಾದರೂ ಇದೆಯೇ?

ಶ್ರೀ ಬಾಬುರಾವ್ ಚವ್ವಾಣ್: ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಕೇಳಿರುವಂತಹ ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಸರ್ಕಾರದ ಮಟ್ಟದಲ್ಲಿ ಇಂತಹ ಪ್ರಸ್ತಾವನೆ ಇಲ್ಲ, ಆದುದರಿಂದ ನಾನು ಇಲ್ಲವೆಂದು ಹೇಳಿದ್ದೇನೆ. ನಾನು ಇದರ ಬಗ್ಗೆ ವಿಚಾರ ಮಾಡಿ ಪ್ರಸ್ತಾವನೆಯನ್ನು ತರಿಸಿಕೊಂಡು ವಾಚನಾಲಯವನ್ನು ಮಾಡಿಕೊಡುವಂಥಾದ್ದಕ್ಕೆ ಬರುವ ದಿವಸಗಳಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ನಾನು ಏಕೆ ಪ್ರಶ್ನೆಯನ್ನು ಕೇಳುತ್ತಿದ್ದೇನೆಂದರೆ, ಮೈಸೂರು ನಗರದಲ್ಲಿ ಪ್ರತಿ ವರ್ಷ 18 ಲಕ್ಷ ರೂಪಾಯಿಗಳ ಲೈಬ್ರರಿ ಸೆಸ್ ಎಂದು ಕಲೆಕ್ಟ್ ಮಾಡುತ್ತಿದ್ದೀರಿ. ಕಳೆದ ನಾಲ್ಕು ವರ್ಷಗಳಿಂದ ಒಂದು ಲೈಬ್ರರಿಯನ್ನು ಸ್ಯಾಂಕ್ಷನ್ ಮಾಡಿಲ್ಲ, ಒಂದು ಸೆಂಟ್ರಲ್ ಲೈಬ್ರರಿಗೆ ಆ ಫೀಪಲ್ಸ್ ಪಾರ್ಕ್‌ನಲ್ಲಿ ಸ್ಯಾಂಕ್ಷನ್ ಕೊಟ್ಟಿರಿ, ಅದೂ ಕೂಡ ಆಗಿಲ್ಲ. ಈ ರೀತಿ ಇರುವಾಗ ಮೈಸೂರು ನಗರದ ಜನರು ಪ್ರತಿ ವರ್ಷ ಕೊಡುವಂತಹ ಲೈಬ್ರರಿ ಸೆಸ್ ಏಕೆ ಕೊಡಬೇಕು? ಇದರ ಬಗ್ಗೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೆಂಬುದನ್ನು ಹೇಳಬೇಕು.

ಶ್ರೀ ಬಾಬುರಾವ್ ಚವ್ವಾಣ್: ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ 17 ಗ್ರಾಂಟ್ಸ್ ಲೈಬ್ರರಿಗಳು ನಡೆಯುತ್ತಿವೆ. ಇನ್ನೂ ಮಾನ್ಯ ಸದಸ್ಯರು ಮಾಡಿ ಕೊಡಬೇಕೆಂದು

ಹೇಳುತ್ತಿದ್ದಾರೆ, ಅದರ ಪ್ರಪೋಸಲ್ ಬಂದರೆ ಸರ್ಕಾರ ಮಾಡಿಕೊಡುವಂತಹ ಪ್ರಯತ್ನವನ್ನು ಮಾಡುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ತಾವು ಈ ವರ್ಷ ಮಾಡುತ್ತೀರೋ, ಅಥವಾ ಮುಂದಿನ ವರ್ಷ ಮಾಡುತ್ತಿರೋ? ನಾನು ಈ ವರ್ಷವೇ ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಬಾಬುರಾವ್ ಚಿವ್ವಾಣ್: ಮಾನ್ಯ ಅಧ್ಯಕ್ಷರೇ, ಇದರ ಬೇಡಿಕೆ ಬಂದ ನಂತರ ಮಾಡುತ್ತೇನೆ.

ಎಸ್.ಎಸ್.ಎಲ್.ಸಿ. ಮೌಲ್ಯಮಾಪನ ಕಾರ್ಯದಲ್ಲಿ ಕರ್ತವ್ಯಲೋಪ.

207(2253)

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಎಸ್.ಎಸ್.ಎಲ್.ಸಿ. ಮೌಲ್ಯ ಮಾಪನ ಕಾರ್ಯದಲ್ಲಿ ಕರ್ತವ್ಯ ಲೋಪ ಕಂಡು ಬಂದಿದೆಯೆ?

ಆ) ಕಂಡುಬಂದಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಈ ಕುರಿತು ಸರ್ಕಾರ ತನಿಖೆಗೆ ಆದೇಶ ಹೊರಡಿಸಿದೆಯೆ?

ಈ) ಈ ಕುರಿತು ಸರ್ಕಾರ ತನಿಖೆಗೆ ಆದೇಶ ಹೊರಡಿಸಿದೆಯೆ?

ಉ) ಪ್ರಶ್ನೆ ಪತ್ರಿಕೆ ಬಹಿರಂಗ ಇತ್ಯಾದಿಗಳಲ್ಲಿ ಯಾರನ್ನು ಹೊಣೆಗಾರರನ್ನಾಗಿ ಗುರುತಿಸಲಾಗಿದೆ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಮೌಲ್ಯಮಾಪನದಲ್ಲಿ ಕರ್ತವ್ಯ ಲೋಪಕ್ಕೆ ಕಾರಣರಾದವರ ವಿರುದ್ಧ, ಲೋಪದೋಷದ ಗಂಭೀರತೆಯನ್ನು ಆಧರಿಸಿ ನಿಯಮಗಳನ್ವಯ ಕ್ರಮ ಜರುಗಿಸಲಾಗಿದೆ.